

ಡಾ.ವಿನೋದ ಛೆಬ್ಬಿ

ಬಾಂಧವ್ಯದಲ್ಲಿ ಪ್ರೇಮಕಾಮುಗಳ ಕಲ್ಪನೆಗಳನ್ನು ಮುಕ್ತವಾಗಿ ವ್ಯಕ್ತಪಡಿಸುವುದಕ್ಕೆ ಸ್ವಚ್ಛಂದತೆ, ಸ್ವಾತಂತ್ರ್ಯ ಇರಬೇಕು.

# 276: ಹೊಸ ದಾರಿ - 16

ಭದ್ರಭಾವವು ಹೊರಗಿನಿಂದ ಬರುವುದಾದರೂ ನೆಮ್ಮದಿ ಬರುವುದು ಅಂತರಂಗದಿಂದ ಎಂದು ಹೋದಸಲ ಮಾತಾಡಿಕೊಂಡೆವು. ನೆಮ್ಮದಿ ಬರಲು ಇನ್ನೊಂದು ಕಾರಣ ಪ್ರೀತಿ– ಪ್ರಣಯಗಳ ಮನದಣಿಯುವ ಪೂರೈಕೆ. ಸಂಗಾತಿಯೊಡನೆ ಇಟ್ಟುಕೊಳ್ಳುವ ಸಂಬಂಧದ ರೀತಿಗೂ ಪ್ರೀತಿ–ಪ್ರಣಯಗಳಿಗೂ ನಿಕಟ ಸಂಬಂಧವಿದೆ. ಅದೇನೆಂದು ಈ ಸಲ ನೋಡೋಣ.

ಮಾಯಾ: ನೀವು ನನ್ನನ್ನು ಇಷ್ಟಪಟ್ಟು, ಬಯಸಿ ಮದುವೆಯಾದಿರಾ?

ಮನೋಜ: ನೀನು ನನ್ನನ್ನು, ನಾನು ನಿನ್ನನ್ನು ಒಪ್ಪಿ ತಾನೇ ಮದುವೆ ಆಗಿದ್ದು?

ಮಾಯಾ: ನಿಮ್ಮ ಅಪ್ಪ–ಅಮ್ಮ ಒಪ್ಪಿದ್ದರಿಂದ ಒಪ್ಪಿದೆ ಎಂದು ಅಂದಿದ್ದಿರಿ?

ಮನೋಜ: ಹೌದು. ನಿನ್ನನ್ನ ನನಗೆ ಪರಿಚಯಿಸಿದ್ದು ಅವರೇ ಅಲ್ಲವೆ?

ಮಾಯಾ: ಒಂದು ವೇಳೆ ಅವರೊಪ್ಪದೆ ಇದ್ದಿದ್ದರೆ ನೀವು ಒಪ್ಪುತ್ತಿದ್ದಿರಾ?

ಮನೋಜ: ನಮ್ಮದು ಅರೇಂಜ್ಡ್ ಮ್ಯಾರೇಜ್. ಏನಿದ್ದರೂ ಪ್ರೀತಿ ಮದುವೆಯಾದ ಮೇಲೆ ಹುಟ್ಟಬೇಕಷ್ಟೆ.

ಮಾಯಾ: ಅದು ಯಾವೊತ್ತೂ ಹುಟ್ಟಲೇ ಇಲ್ಲ! ನಾವು ಮುಂಚೇನೇ ಪ್ರೀತಿಸಿ ನೋಡಬೇಕಿತ್ತು!

ಈ ಸಂವಾದದಲ್ಲಿ ಒಪ್ಪಿಗೆ ಬೇರೆ, ಇಷ್ಟ ಬೇರೆ ಎಂದು ಮಾಯಾಳ ಅಭಿಪ್ರಾಯವಿದ್ದು, ಅದಕ್ಕೆ ಮನೋಜ ಸ್ಪಂದಿಸುತ್ತಿಲ್ಲ ಎನ್ನುವುದೇನೋ ಎದ್ದುಕಾಣುತ್ತದೆ. ಸ್ವಲ್ಪ ಆಳಕ್ಕೆ ಹೋದರೆ ಮಾಯಾಳ ಹತಾಶೆ, ಹಾಗೂ ಮನೋಜನ ನಿಸ್ಸಹಾಯಕತೆ– ಇವು ದಾಂಪತ್ಯದುದ್ದಕ್ಕೂ ಹರಿಯುತ್ತ ಇಬ್ಬರನ್ನೂ ಸೆಳೆದು ಕೊಚ್ಚಿಕೊಂಡು ಹೋಗುತ್ತಿರುವುದು ಗೊತ್ತಾಗುತ್ತದೆ. ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಅರಳಿದ ದಾಂಪತ್ಯದಲ್ಲಿ ಪರಸ್ಪರ ಪ್ರೀತಿ– ಸ್ವೀಕೃತಿಗಳನ್ನು ಹುಡುಕಲು ಹೊರಟು, ಕೊನೆಗೆ ಏನೂ ಸಿಗಲಿಲ್ಲ ಎನ್ನುವಾಗ ಇಬ್ಬರೂ ಆಶಯದೊಡನೆ ಸಂಬಂಧ ಕಳಚಿಕೊಂಡಿದ್ದಾರೆ. ಮದುವೆಯಾಗಿ ಪ್ರೀತಿಸಲು ಸೋತು ಸುಣ್ಣವಾದ ಮೇಲೆ ಪ್ರೀತಿಸಿ ಮದುವೆ ಆಗಬೇಕಾಗಿತ್ತು ಎನ್ನುತ್ತಿದ್ದಾರೆ. ಸಾಂಪ್ರದಾಯಿಕ ವಿವಾಹ ಪದ್ಧತಿಯು ಆಧುನಿಕ ದಾಂಪತ್ಯಗಳ ಮೇಲೆ ಏನು ಪರಿಣಾಮ ಮಾಡುತ್ತದೆ ಎನ್ನುವುದನ್ನು ಈ ಸಲ ನೋಡೋಣ.

ನಮ್ಮ ಸಾಂಪ್ರದಾಯಿಕ ವಿವಾಹ ಪದ್ಧತಿಗೆ ಒಂದು ಉದ್ದೇಶವಿದೆ: ಸುರಕ್ಷಿತತೆ, ಭದ್ರತೆ, ಬದ್ಧತೆ, ಜವಾಬ್ದಾರಿ, ನಿರೀಕ್ಷೆಗಳ ಪೂರೈಕೆ, ಸಂಭೋಗ ಹಾಗೂ ಸಂತಾನ– ಈ ಅಂಶಗಳ ಬಗೆಗೆ ಖಚಿತತೆ. ಅದಕ್ಕಾಗಿ ತರುಣ– ತರುಣಿಯರ ಮನೆತನ, ವಿದ್ಯಾಭ್ಯಾಸ, ಉದ್ಯೋಗ ಇತ್ಯಾದಿ ಒಳಗೊಂಡ ಪಟ್ಟಿಗಳನ್ನು ಒಂದಕ್ಕೊಂದು ಹೋಲಿಸುತ್ತಾರೆ. ಇವು ಹೊಂದಿಕೊಂಡರೆ ಮುಗಿಯಿತು, ಅವರಿಬ್ಬರೂ ಅರ್ಥಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ಇರುವಾಗಲೇ ಮದುವೆ ನಡೆದೂಬಿಡುತ್ತದೆ. (ನೆನಪಿಡಿ: ವಿವಾಹಪೂರ್ವದ ಅವಧಿಯು ವಿವಾಹ ಸಮಾರಂಭದ ವ್ಯವಸ್ಥೆಗಾಗಿ ಇದೆಯೇ ಹೊರತು ತರುಣ– ತರುಣಿಯರ ಒಡನಾಟಕ್ಕಲ್ಲ!) ಇನ್ನು ಪ್ರೀತಿ–ಪ್ರೇಮ, ಅನ್ಯೋನ್ಯತೆ? ಮದುವೆ ಒಂದಾದರೆ ಸರಿ, ಉಳಿದೆಲ್ಲವೂ ಅದನ್ನು ಹಿಂಬಾಲಿಸುತ್ತವೆ ಎಂದು ನಂಬಲಾಗುತ್ತದೆ. (ಉದಾ. ಮದುವೆಯ ನಂತರ ಮಿತಭಾಷಿ ಹುಡುಗ ಹೆಚ್ಚು ಮಾತಾಡುತ್ತಾನೆ, ಹಾಗೂ ಹುಡುಗಿಯ ಹಟಮಾರಿತನ ಕಡಿಮೆಯಾಗುತ್ತದೆ ಎಂದುಕೊಂಡು ನಿರಾಶೆಗೊಂಡವರು ಸಾಕಷ್ಟಿದ್ದಾರೆ.) ಪರಿಣಾಮ? ದಾಂಪತ್ಯದ ಉದ್ದಕ್ಕೂ ಪ್ರೇಮವಿಲ್ಲದಿದ್ದರೂ ಕಾಮ ನಡೆಯುತ್ತದೆ, ಅನ್ಯೋನ್ಯ ಭಾವ ಇಲ್ಲದಿದ್ದರೂ ವ್ಯವಹಾರ ನಡೆಯುತ್ತದೆ, ಒಡನಾಟ ಇಲ್ಲದಿದ್ದರೂ 'ಸಹ'ವಾಸ ನಡೆಯುತ್ತದೆ. ತಾಯ್ತಂದೆತನ ಹೊರಲು ಮನಸ್ಸಿಲ್ಲದಿದ್ದರೂ ಮಕ್ಕಳು ಆಗುತ್ತವೆ. ಹೀಗೆ, ಪಟ್ಟಿಯಲ್ಲಿ ನಮೂದಿಸಿದ ಎಲ್ಲವೂ ಸಿಕ್ಕರೂ ಪ್ರೀತಿ, ಒಡನಾಟ ಸಿಗದಿರುವಾಗ ಒಬ್ಬರನ್ನೊಬ್ಬರು ಗಾಸಿಗೊಳಿಸಿ, ಕೊನೆಗೆ ಸಾಂಗತ್ಯ ಎಂದರೆ ಇಷ್ಟೆಯೇ ಎಂದು ಸುಮ್ಮನಾಗುತ್ತಾರೆ. ದಾಂಪತ್ಯವು ಕೊನೆಯರಿಯದ ಅಪೇಕ್ಷೆಗಳನ್ನು ಪೂರೈಸಲು ವಿಪರೀತ ಕಾರ್ಯ ನಿರ್ವಹಿಸಿ ಕೆಟ್ಟುನಿಂತ ಕಾರ್ಖಾನೆ ಆಗುತ್ತದೆ. ಇದನ್ನೇ ಮಾಯಾಮನೋಜ್ ಅನುಭವಿಸುತ್ತಿದ್ದಾರೆ. ಇವರಲ್ಲಿ ಪ್ರೀತಿಪ್ರಣಯ ಅಸಾಧ್ಯವಾಗಿರುವುದರ ಹಿನ್ನೆಲೆ ತಿಳಿಯೋಣ.

ಭದ್ರತೆ–ಬದ್ಧತೆಯ ಮಾದರಿಯನ್ನು ಆಧರಿಸಿದ ಸಾಂಪ್ರದಾಯಿಕ ದಾಂಪತ್ಯಗಳು ಜಗತ್ತಿನಾದ್ಯಂತ ಮೊದಲಿನಿಂದಲೂ ನಡೆದುಕೊಂಡು ಬಂದಿವೆ. ಆದರೆ ಈ ವ್ಯವಸ್ಥೆಗೆ ಅದರದೇ ಆದ ಇತಿಮಿತಿಗಳಿವೆ. ಒಂದು: ಇದು ಪುರುಷ ಪ್ರಧಾನ ವ್ಯವಸ್ಥೆಯಾಗಿದ್ದು, ಗಂಡಸರಿಗೆ ವರವಾದಂತೆ ಶಾಪವೂ ಆಗಿದೆ. ಗಂಡಸರು ಕರ್ತವ್ಯದ ನಿರ್ವಹಣೆಯಲ್ಲಿ ಭಾವನೆಗಳನ್ನು ವ್ಯಕ್ತಪಡಿಸಲು ಅವಕಾಶವಿಲ್ಲ. ಉದಾ. ಕೈಲಾಗದಿದ್ದರೆ ಆಗುವುದಿಲ್ಲ ಅಳಲು ಗಂಡಸುತನಕ್ಕೆ ಒಪ್ಪುವುದಿಲ್ಲ. ಹಾಗಾಗಿ ಹಲ್ಲುಕಚ್ಚಿಕೊಂಡು ಮಾಡಿ ಮುಗಿಸುತ್ತಾರೆ. ಇಲ್ಲವಾದರೆ ಗೋಡೆ ಹಾಕಿಕೊಳ್ಳುವುದಕ್ಕೋ ಕೋಪಕ್ಕೋ ಮದ್ಯಕ್ಕೋ ಶರಣಾಗುತ್ತಾರೆ. ಈ ಪ್ರಕ್ರಿಯೆಯಲ್ಲಿ ಅವರ ಸೂಕ್ಷ್ಮ ಭಾವನೆಗಳು ಹತ್ತಿಕ್ಕಲ್ಪಡುತ್ತವೆ– ಪ್ರೀತಿಯೂ ಸೇರಿ. ಎರಡು: ಬದ್ಧತೆಯಿಂದ ಸಂಗಾತಿಯ ಎಲ್ಲ ಬಯಕೆಗಳನ್ನು ಪೂರೈಸಿ ಹಾಸಿಗೆ ಸೇರುವಾಗ ಪ್ರಣಯಕ್ಕೆ ಆಸಕ್ತಿ ಉಳಿದಿರುವುದಿಲ್ಲ; ಹಾಗಾಗಿ ಕಾಮಕೂಟವು ಯಾಂತ್ರಿಕವಾಗುತ್ತದೆ. ಮೂರು: ಹೊಣೆಹೊರುವ ಪಾಲುದಾರ, ಹಂಚಿಕೊಳ್ಳುವ ಸ್ನೇಹಿತ/ತೆ, ಕರ್ತವ್ಯನಿಷ್ಠ ಸಹಾಯಕ/ಕಿ ಮುಂತಾದ ನಾನಾ ಪಾತ್ರಗಳನ್ನು ನಿರ್ವಹಿಸಿದ ನಂತರ ರೋಚಕ ಪ್ರಣಯಿಯಾಗುವ ಚೈತನ್ಯ ಯಾರಿಗೂ ಉಳಿದಿರುವುದಿಲ್ಲ. ಹಾಗಾಗಿ ದಾಂಪತ್ಯದಲ್ಲಿ ಅನ್ಯೋನ್ಯತೆ, ಪ್ರೀತಿ–ಪ್ರಣಯ, ರೋಚಕತೆಗಳನ್ನು ಜೀವಂತ ಇಡಬೇಕಾದರೆ ಸಾಂಪ್ರದಾಯಿಕ ವ್ಯವಸ್ಥೆಯಿಂದ ಹೊರಬಂದು ಯೋಚಿಸಬೇಕಾಗುತ್ತದೆ.

ದಾಂಪತ್ಯವನ್ನು ಒಂದು ಉದ್ದದ ರೇಖೆಗೆ ಹೋಲಿಸಿದರೆ ಒಂದು ತುದಿಯಲ್ಲಿ ಭದ್ರತೆಬದ್ಧತೆ ಇದ್ದರೆ ಇನ್ನೊಂದು ತುದಿಯಲ್ಲಿ ಸ್ವಚ್ಛಂದತೆ ಹಾಗೂ ಮುಕ್ತ ಪ್ರಣಯಾಭಿವ್ಯಕ್ತಿಯಿವೆ (ಇದನ್ನು ಅರ್ಥಮಾಡಿಕೊಳ್ಳುವುದಕ್ಕಾಗಿ ಕಾಲೇಜು ಹುಡುಗಹುಡುಗಿಯರ ಸಂಬಂಧವನ್ನು ಗಮನಿಸಿ: ಯಾವ ಜವಾಬ್ದಾರಿಯಾಗಲೀ ಬದ್ಧತೆಯಾಗಲೀ ಇಲ್ಲ. ನಾಳೆ ಮುಂದುವರಿಯುವ ನಿರೀಕ್ಷೆಯೂ ಇಲ್ಲ. ಅದಕ್ಕೆಂದೇ ಹುಚ್ಚೆಬ್ಬಿಸುವ ಪ್ರೀತಿ, ಕಾತರ, ಉದ್ವೇಗ ಮೆರೆಯುತ್ತಾರೆ). ಕರ್ತವ್ಯದಿಂದ ದೂರ ಸರಿದಾಗ ಮಾತ್ರ ಸ್ವಚ್ಛಂದತೆ, ಅಭಿವ್ಯಕ್ತಿ ಸ್ವಾತಂತ್ರ್ಯ, ಬಿಂದಾಸುತನ (carefree attitude) ನೆಲೆಗೊಂಡು ಪ್ರೀತಿಪ್ರಣಯ ಮುಕ್ತವಾಗಿ ಅರಳುತ್ತವೆ. ರೋಚಕತೆ ತಾನೇತಾನಾಗಿ ವಿಜೃಂಭಿಸುತ್ತವೆ.

ಪ್ರಶ್ನೆ ಏನೆಂದರೆ, ಸಾಂಪ್ರದಾಯಿಕ ನೆಲೆಗಟ್ಟಿನಲ್ಲಿ ಮುಕ್ತಪ್ರಣಯದ ಉನ್ಮಾದವನ್ನು ತರಲು ಸಾಧ್ಯವಿದೆಯೆ? ಖಂಡಿತವಾಗಿಯೂ ಸಾಧ್ಯವಿದೆ. ಬದ್ರತೆಭದ್ಧತೆಗಳಿಗೆ ಪ್ರೀತಿಪ್ರಣಯಗಳನ್ನು ಜೋಡಿಸಿ ಸಮತೋಲನ ಸಾಧಿಸಲು ಸಾಧ್ಯವಿದೆ. ಅದಕ್ಕಾಗಿ ಮೊದಲು ರೂಢಿಗತವಾದ ನಾನು ಗಂಡ, ನಾನು ಹೆಂಡತಿ ಎನ್ನುವ ವೇಷವನ್ನು ಕಳಚಬೇಕು. ನಾನು ಗಂಡು, ನಾನು ಹೆಣ್ಣು ಎನ್ನುವ ಲಿಂಗೀಯತೆಯ ಚೌಕಟ್ಟಿನಿಂದಲೂ ಹೊರಬರಬೇಕು. ಪರಸ್ಪರಿಂದ ಅಪೇಕ್ಷೆ ನಿರೀಕ್ಷೆಗಳನ್ನು ಅವು ಯಾವೊತ್ತೂ ಇರಲಿಲ್ಲ ಎನ್ನುವಂತೆ ಮರೆತುಬಿಡಬೇಕು. ಸಂಗಾತಿಯೊಂದಿಗೆ ಆಳುವ, ಅಥವಾ ಕಚ್ಚಿಕೊಳ್ಳುವ ಸಂಬಂಧ ಬೇಡ. ಇಬ್ಬರೂ ಸೇರಿ ಹೊಸ ಸಂಬಂಧಕ್ಕೆ ತಳಪಾಯ ಹಾಕಬೇಕು. ಇದರಲ್ಲಿ ಪ್ರೇಮಕಾಮುಗಳ ಕಲ್ಪನೆಗಳನ್ನು ಮುಕ್ತವಾಗಿ ವ್ಯಕ್ತಪಡಿಸುವುದಕ್ಕೆ ಸ್ವಾತಂತ್ರ್ಯ ಇರಬೇಕು.

ಪ್ರಯೋಗ 11: ಸಂಗಾತಿಗೆ 'ನಿನ್ನಿಷ್ಟಬಂದ ಸಂಗಾತಿಯನ್ನು ಮದುವೆಯಾಗಿದ್ದರೆ ಹೇಗೆಲ್ಲ ವರ್ತಿಸುತ್ತಿದ್ದೆ?' ಎಂದು ಕೇಳಿ ಅವರ ಕಲ್ಪನೆಗಳನ್ನು ಗರಿಗೆದರಿಸಲು ಯತ್ನಿಸಿ. ಸಂಗಾತಿಯ ಹಳೆಯ ಪ್ರೇಮಪ್ರಕರಣಗಳನ್ನು ಕುತೂಹಲದಿಂದ ಸವಿಯುವ ಅಭ್ಯಾಸ ಮಾಡಿಕೊಳ್ಳಿ. ಸಂಗಾತಿಯನ್ನು ಉದ್ಯಾನದಲ್ಲಿ ಕುಳಿತ ಅಪರಿಚಿತ ವ್ಯಕ್ತಿಯೆಂದು ಕಲ್ಪಿಸಿಕೊಳ್ಳುತ್ತ, 'ನಿನ್ನ ಮೇಲೆ ನನಗೆ ಮನಸ್ಸಾಗಿದೆ' ಎನ್ನುತ್ತ ನಾಟಕವಾಡಿ.

ವಾರದ ಪ್ರಶ್ನೆಗಳು: ಮುಕ್ತಪ್ರಣಯಕ್ಕೆ ಮನಸ್ಸು ಬಿಚ್ಚಲು ಧೈರ್ಯ ಸಾಲದಿದ್ದರೆ ನಿಮಗೆ ನೀವೇ ಪ್ರಶ್ನೆಹಾಕಿಕೊಳ್ಳಿ: ಸಂಗಾತಿಯ ಒಳಮನಸ್ಸನ್ನು ಅರ್ಥಮಾಡಿಕೊಳ್ಳದಿದ್ದರೆ ಅವರಿಗೆ ಸ್ಪಂದಿಸುವುದಾದರೂ ಹೇಗೆ ಸಾಧ್ಯ? ಆಗ ಭದ್ರತೆಯನ್ನು ಕಳೆದುಕೊಳ್ಳುವ ಭಯವಾದರೆ ನೆನಪಿಡಿ: ಈ ರೀತಿಯ ಹಂಚಿಕೊಳ್ಳುವಿಕೆಯು ಹತ್ತಿರವಾಗುವ ಉದ್ದೇಶದಿಂದ; ಪರಸಂಬಂಧಕ್ಕೆ ಅಥವಾ 'ತೆರೆದ' ಸಂಬಂಧಕ್ಕೆ ಇದು ಪೀಠಿಕೆಯಲ್ಲ. ಪರಿಣಾಮವನ್ನು ಬರೆದು ತಿಳಿಸಿ.